# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 505
ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸುವ ದಿನಾಂಕ : 24-09-2020

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಲಾಕ್‌ಡೌನ್ ಸಮಯದಲ್ಲಿ ಹಲವು ಜನರು ಉದ್ಯೋಗ ಕಳೆದುಕೊಂಡಿರುವುದು ಮತ್ತು ವೇತನದ ಅರ್ಧಭಾಗವನ್ನು ಮಾತ್ರ ಪಡೆಯುತ್ತಿರುವುದು ಸರ್ಕಾರದ ಗಮನದಲ್ಲಿಯೇ; | ಹೌದು. |
| (ಆ) | ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು; ಸಣ್ಣ ಕೈಗಾರಿಕೆಗಳನ್ನು ಸುಧಾರಿಸಿ ಉದ್ಯೋಗಿಗಳನ್ನು ಹುರಿದುಂಬಿಸುವಂತೆ ಸರ್ಕಾರವು ಇಟ್ಟ ಹೆಜ್ಜೆಗಳೇನು; | ಕೋವಿಡ್-19 ಲಾಕ್‌ಡೌನ್ ಪರಿಣಾಮವಾಗಿ ತೀವ್ರ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಕ್ಷೇತ್ರವನ್ನು ಪುನಶ್ಚೇತನಗೊಳಿಸಲು ಸರ್ಕಾರವು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ:-<br><br>1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.<br><br>2. ಇಂಧನ ಇಲಾಖೆಯು ವಿದ್ಯುತ್ ಬಿಲ್ ಅನ್ನು ನಿಗಧಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1.00 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/-<br><br>1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ — ಶೇ 1% ರಿಯಾಯಿತಿ<br>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ — ಶೇ 0.5% ರಿಯಾಯಿತಿ<br>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ — ಯಾವುದೇ ರಿಯಾಯಿತಿ ಇರುವುದಿಲ್ಲ |

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | | 3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಿರುತ್ತದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.<br><br>4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್, ಮೇ ಮತ್ತು ಜೂನ್ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.<br><br>ಏಪ್ರಿಲ್ 2020 ತಿಂಗಳ ಕಂತು — ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು<br>ಮೇ 2020 ತಿಂಗಳ ಕಂತು — ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು<br>ಜೂನ್ 2020 ತಿಂಗಳ ಕಂತು — ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |
| (ಇ) | ರಾಜ್ಯದಲ್ಲಿ ಕಳೆದ ವರ್ಷದಿಂದ ಯಾವ ಯಾವ ಭಾಗಗಳಲ್ಲಿ ಬಂಡವಾಳ ಹೂಡಿಕೆಯಾಗಿದೆ? (ಪೂರ್ಣ ವಿವರ ನೀಡುವುದು). | 2019-20 ನೇ ಸಾಲಿನಲ್ಲಿ ಹೊಸದಾಗಿ ಸ್ಥಾಪನೆ ಮಾಡಲು ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿಯಲ್ಲಿ ಅನುಮೋದನೆಗೊಂಡ ಯೋಜನೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಈ ಎಲ್ಲಾ ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. |

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

| ವಿಧಾನ ಪರಿಷತ್ ಪ್ರಶ್ನೆ ಸಂಖ್ಯೆ: 584 (505)– ಶ್ರೀ ಬಿ.ಜಿ.ಪಾಟೀಲ್ : ಅನುಬಂಧ–1 | | | | | |
|---|---|---|---|---|---|
| # | ಜಿಲ್ಲೆ | ಜರುಗಿದ ಏಕ ಗವಾಕ್ಷಿ ಸಮಿತಿ ಸಭೆಗಳು | ಅನುಮೋದನೆಗೊಂಡ ಯೋಜನೆಗಳು | ಬಂಡವಾಳ ಹೂಡಿಕೆ ರೂ.ಲಕ್ಷಗಳಲ್ಲಿ | ಉದ್ಯೋಗ ಅವಕಾಶ |
| 1 | ಬಾಗಲಕೋಟೆ | 3 | 7 | 2,302.80 | 261 |
| 2 | ಬೆಂಗಳೂರು ಗ್ರಾಮಾಂತರ | 2 | 198 | 1,285.25 | 12,217 |
| 3 | ಬೆಂಗಳೂರು ನಗರ | 3 | 119 | 1,11,907.25 | 12,454 |
| 4 | ಬೆಳಗಾವಿ | 3 | 128 | 45,000.44 | 3,587 |
| 5 | ಬಳ್ಳಾರಿ | 2 | 85 | 22,848.32 | 5,207 |
| 6 | ಬೀದರ | 1 | 40 | 2,560.00 | 633 |
| 7 | ಚಾಮರಾಜನಗರ | 3 | 43 | 7,268.55 | 1,119 |
| 8 | ಚಿಕ್ಕಬಳ್ಳಾಪುರ | 2 | 30 | 10,647.85 | 1,321 |
| 9 | ಚಿಕ್ಕಮಗಳೂರು | 3 | 4 | 411.30 | 221 |
| 10 | ಚಿತ್ರದುರ್ಗ | 2 | 9 | 2,376.83 | 990 |
| 11 | ದಕ್ಷಿಣ ಕನ್ನಡ | 3 | 38 | 9,444.20 | 1,701 |
| 12 | ದಾವಣಗೆರೆ | 3 | 17 | 4,927.58 | 1,242 |
| 13 | ಧಾರವಾಡ | 2 | 32 | 4,058.21 | 567 |
| 14 | ಗದಗ | 5 | 17 | 4,568.59 | 279 |
| 15 | ಹಾಸನ | 1 | 3 | 554.00 | 99 |
| 16 | ಹಾವೇರಿ | 1 | 2 | 250.00 | 25 |
| 17 | ಕಲಬುರುಗಿ | 2 | 10 | 3,775.00 | 378 |
| 18 | ಕೊಡಗು | 2 | 4 | 1,026.25 | 465 |
| 19 | ಕೋಲಾರ | 1 | 84 | 33,175.00 | 3,423 |
| 20 | ಕೊಪ್ಪಳ | 2 | 13 | 4,336.98 | 245 |
| 21 | ಮಂಡ್ಯ | 2 | 10 | 1,252.01 | 563 |
| 22 | ಮೈಸೂರು | 3 | 416 | 65,641.34 | 8,062 |
| 23 | ರಾಯಚೂರು | 3 | 14 | 2,136.00 | 144 |
| 24 | ರಾಮನಗರ | 3 | 50 | 243.55 | 2,048 |
| 25 | ಶಿವಮೊಗ್ಗ | 3 | 86 | 12,640.96 | 1,846 |
| 26 | ತುಮಕೂರು | 3 | 234 | 67,623.39 | 11,453 |
| 27 | ಉಡುಪಿ | 4 | 49 | 10,101.43 | 1,805 |
| 28 | ಉತ್ತರಕನ್ನಡ | 2 | 3 | 425.96 | 80 |
| 29 | ವಿಜಯಪುರ | 4 | 11 | 1,620.28 | 247 |
| 30 | ಯಾದಗಿರಿ | 1 | 31 | 10,177.50 | 1,268 |
| | **ಒಟ್ಟು** | **74** | **1,787** | **4,44,586.82** | **73,950** |